ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಯಾವಗಲ್ ರವರು ಬಹಳ ಮುಖ್ಯವಾದಂಥ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ಕೃಷಿ ರಂಗಕ್ಕೂ ಮತ್ತು ಕೈಗಾರಿಕಾ ರಂಗಕ್ಕೂ ಇರತಕ್ಕಂಥ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಒಂದೆರಡು ಸಲಹೆಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕೈಗಾರಿಕಾರಂಗದಲ್ಲಿ ಉತ್ಪಾದನೆ ಹೆಚ್ಚು ಆದರೆ, ಯಾರು ಉತ್ಪಾದನೆ ಮಾಡುತ್ತಾರೆ ಅವನಿಗೆ ಲಾಭ ಜಾಸ್ತಿಯಾಗುತ್ತದೆ. ಹೆಚ್ಚು ಹೆಚ್ಚು ಉತ್ಪಾದನೆಯಾದಷ್ಟು ಕಾರ್ಖಾನೆಯ ಮಾಲಿಕರಿಗೆ ಲಾಭ ಜಾಸ್ತಿಯಾಗುತ್ತದೆ. ಕೃಷಿ ರಂಗದಲ್ಲಿ ಆ ರೀತಿ ಇಲ್ಲ. ಕೃಷಿ ರಂಗದಲ್ಲಿ ರೈತರು ಹೆಚ್ಚಿಗೆ ಉತ್ಪಾದನೆ ಮಾಡಿದರೆ ಸಂತೋಷವನ್ನು ಪಡುವ ಬದಲು ಕಣ್ಣೀರು ಇಡುವಂಥ ಒಂದು ವಾತಾವರಣದ ಪರಿಸ್ಥಿತಿ ಈ ದೇಶದಲ್ಲಿ ಕಳೆದ ಅನೇಕ ಶತಶತಮಾನಗಳಿಂದ ನಡೆದುಕೊಂಡು ಬಂದಿದೆ. ಆದ್ದರಿಂದ ಅವರು ಹೇಳುವಂಥ ಬೆಂಬಲ ಬೆಲೆ ನಿಗಧಿ ಮಾಡತಕ್ಕಂಥದ್ದು ಅದು ರಾಷ್ಟ್ರೀಯ ಮಟ್ಟದಲ್ಲಿ ಕೆಲವು ಧಾನ್ಯಗಳು ಮತ್ತು ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿಪಡಿಸುತ್ತಾರೆ. ಕರ್ನಾಟಕ ರಾಜ್ಯದ ಯಾವುದೇ ಭಾಗ ಇರಬಹುದು, ಕೃಷಿ ಉತ್ಪಾದನೆಗೆ ನಿಗದಿತ ಬೆಂಬಲ ಬೆಲೆಗಿಂತ ಕಡಿಮೆ ಯಾವುದೇ ಮಾರುಕಟ್ಟೆಯಲ್ಲಿ ಆದು ಮಾರಾಟವಾಗುತ್ತಿದೆ, ಅದನ್ನು ತಡೆಗಟ್ಟುವಂತೆ ಬೆಂಬಲ ಬೆಲೆಗಳು ಬರುವವರೆಗೆ ಇಡುವ ಹಾಗೆ ನೋಡಿಕೊಳ್ಳತಕ್ಕಂಥದ್ದು ಸರ್ಕಾರದ ಕರ್ತವ್ಯ ಕೂಡ ಇದೆ. ನಾನು ತಕ್ಷಣ ವರದಿ ತರಿಸಿ ಮಾರುಕಟ್ಟೆಯಲ್ಲಿರುವ ಬೆಲೆಯ ವರದಿ ತರಿಸಿ ಗೋವಿನ ಜೋಳ, ರಾಗಿ, ಭತ್ತ ಇರಬಹುದು, ಯಾವುದೇ ಕೃಷಿ ಉತ್ಪನ್ನ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟವಾಗುತ್ತಿದೆ, ಬೆಲೆ ಸ್ಥಿರೀಕರಿಸತಕ್ಕಂಥ ಕ್ರಮ ತಕ್ಷಣ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅದರ ಜೊತೆಗೆ, ಹತ್ತಿಯ ಬಗ್ಗೆ ನಾವು ವಿಧಿಸಿದ ಕೆಲವು ಟ್ಯಾಕ್ಸ್ ಏನು ಇದೆ, ಅದನ್ನು ಯಾವ ಹಂತದಲ್ಲಿ ಟ್ಯಾಕ್ಸ್ ಹಾಕಬೇಕೆಂಬ ಬಗ್ಗೆ ಈ ಹತ್ತಿ ವರ್ತಕರು, ರೈತರು ಮುಷ್ಕರ ಮಾಡುತ್ತಿದ್ದಾರೆ. ಆ ಸಮಸ್ಯೆ ಬಗೆಹರಿದಿದೆ, ಉಪಮುಖ್ಯಮಂತ್ರಿಗಳು ಅದನ್ನು ಬಗೆಹರಿಸಿದ್ದಾರೆ. ಅವರು ನಿಗದಿಪಡಿಸಿರತಕ್ಕಂಥ ಯಾವ ಹಂತದಲ್ಲಿ ಟ್ಯಾಕ್ಸ್ ಹಾಕಬೇಕೆನ್ನುವುದನ್ನು ನಿರ್ಣಯ ಮಾಡಿದ್ದಾರೆ. ಆ ವಿಷಯ ಬಗೆಹರಿದಿದೆ ಎಂದು ನಾನು ಹೇಳುತ್ತೇನೆ, ಅದಕ್ಕೆ ತಿದ್ದುಪಡಿ ಕೂಡ ಆಗಿದೆ. ಹತ್ತಿ ವರ್ತಕರು ಇನ್ನು ಮುಂದೆ ಮುಷ್ಕರ ಹೂಡುವುದಕ್ಕೆ ಅವಕಾಶ ಇಲ್ಲ ಎನ್ನುವುದನ್ನು ನಾನು ಸದನದ ಗಮನಕ್ಕೂ ಮತ್ತು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಆ ರೀತಿಯಾಗಿ ಏನಾದರೂ ನಡೆದಿದ್ದರೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರಿಗೆ ತಿಳಿಸಿ ಅದನ್ನು ಯಾವರೀತಿಯಾಗಿ ವ್ಯವಸ್ಥೆ ಮಾಡಬೇಕು ಎನ್ನತಕ್ಕಂಥದ್ದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ತುಂಗಭದ್ರಾ ಎಡದಂಡೆ ಕಾಲುವೆ ದುರಸ್ಥಿ

ಶ್ರೀ ಶ್ರೀರಂಗದೇವರಾಯಲು (ಗಂಗಾವತಿ) : ತುಂಗಭದ್ರಾ ಎಡದಂಡೆ ಕಾಲುವೆ ನೂರು ದಿನಗಳಲ್ಲಿ ರಿಪೇರಿ ಮಾಡಿ ಮುಗಿಸಬೇಕೆಂದು ಐ.ಸಿ.ಸಿ. ಸಭೆಯಲ್ಲಿ ನಿರ್ಣಯ ಆಗಿತ್ತು. 100ದಿನಗಳಲ್ಲಿ ಮುಗಿಸದ್ದಿದ್ದರೆ ಯಾವ ಕ್ರಾಪ್ ಅಲ್ಲಿ ಬರುವುದಿಲ್ಲ. ನೀರು ಆಗಸ್ಟ್ 15ಕ್ಕೆ ಕೊಟ್ಟರೆ, ರೈತರ ಎರಡು ಬೆಳೆ

ಹಾಳಾಗುತ್ತದೆ. ಆದಕಾರಣ, ನಾನು ನೀರಾವರಿ ಸಚಿವರನ್ನು ಮತ್ತು ಉಪಮುಖ್ಯಮಂತ್ರಿಗಳನ್ನು ಕೇಳುವುದು ಇಷ್ಟೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ 25 ಡಿಸ್ಟ್ರಿಬ್ಯೂಟರ್‌ವರೆಗೆ ನೀವು 6 ತಿಂಗಳಾದರೂ ಪರವಾ ಇಲ್ಲ, ಡಿಸ್ಟ್ರಿಬ್ಯೂಟರ್ಸ್ ಎಲ್ಲಾ ರಿಪೇರಿ ಮಾಡಿಸಿಕೊಡಬೇಕು. ಗುತ್ತಿಗೆದಾರರು ಸ್ಟ್ರೈಕ್ ಮಾಡುತ್ತಿದ್ದಾರೆ, ಟೆಂಡರ್ ಓಪನ್ ಮಾಡುವ ಕೆಲಸ ಆಗಿಲ್ಲ, ಕೆಲಸ ಪ್ರಾರಂಭವಾದ ನಂತರ ಕೆನಾಲ್ ಪ್ರಾರಂಭ ಮಾಡುವುದಕ್ಕೆ ಐ.ಸಿ.ಸಿ. ಸಭೆಯಲ್ಲಿ ತೀರ್ಮಾನವಾಗಿದೆ. ಕೆಲಸ ಯಾವಾಗ ಪ್ರಾರಂಭವಾಗುತ್ತದೆ, 100 ದಿವಸಗಳು ಯಾವಾಗ ಆಗುತ್ತವೆ, ನಮಗೆ ನೀರು ಯಾವಾಗ ಕೊಡುತ್ತೀರಿ. ದಯಮಾಡಿ ನನ್ನ ಕ್ಷೇತ್ರದಲ್ಲಿ 25 ಡಿಸ್ಟ್ರಿಬ್ಯೂಟರ್‌ವರೆಗೆ ಕೇಳಿದ್ದು. ನಾನು ಉಪಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ, 10 ಕೋಟಿ ರೂಪಾಯಿಗಳನ್ನು ಕೊಟ್ಟು ನನ್ನ ಡಿಸ್ಟ್ರಿಬ್ಯೂಟರ್ಸ್ ಎಲ್ಲಾ ಒಂದು ಸಲ ರಿಪೇರಿ 6 ತಿಂಗಳ ನಂತರ ನೀರು ಕೊಡಿ, ಪರವಾ ಇಲ್ಲ, ರೈತರಿಗೆ ಅನುಕೂಲವಾಗುತ್ತದೆ. ಆಗಸ್ಟ್ 15ನೇ ತಾರೀಖಿಗೆ ನೀರು ಕೊಟ್ಟರೆ ಎರಡು ಬೆಳೆ ಹಾಳಾಗುತ್ತವೆ. ಮುಂದಿನ ವರ್ಷ ನಾವು ಕ್ರಾಪ್ ಸೀಡ್ಸ್ ಹಾಕುವುದು ಡಿಲೇ ಆಗುತ್ತದೆ. ನಾನು ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ 6 ತಿಂಗಳು ನೀರು ಬೇಡ, ನನ್ನ ಕ್ಷೇತ್ರಕ್ಕೆ 10 ಕೋಟಿ ರೂಪಾಯಿಗಳನ್ನು ಕೊಟ್ಟು ಡಿಸ್ಟ್ರಿಬ್ಯೂಟರ್ ರಿಪೇರಿ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಖಾತೆ ಸಚಿವರು) : ಶ್ರೀರಂಗದೇವರಾಯಲುರವರು ಹೇಳಿರುವುದು ನಿಜ. ಅಲ್ಲಿ ಸಮಸ್ಯೆ ಇದೆ, ಇಲ್ಲವೆಂದು ನಾವು ಹೇಳುತ್ತಿಲ್ಲ. 9ಕೋಟಿ ರೂಪಾಯಿಗಳವರೆಗೆ ಈ ವರ್ಷದ ಬಡ್ಜೆಟ್‌ನಲ್ಲಿ ಇಟ್ಟಿದ್ದೇವೆ. ಅಲ್ಲಿರತಕ್ಕಂಥ ತುರ್ತು ಪರಿಸ್ಥಿತಿಯನ್ನು ಮನಗಂಡು 15ಕೋಟಿ ರೂಪಾಯಿಗಳವರೆಗೆ ಇದಕ್ಕೆ ಹೆಚ್ಚು ಕೊಟ್ಟಿದ್ದೇವೆ. ನೀವು ಕಾಡಾ ಸಚಿವರಾಗಿದ್ದಾಗ ಕೆಲಸವನ್ನು ಮಾಡಿದ್ದೀರಿ, 9 ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೆವು, ಅದು ಸಾಲುವುದಿಲ್ಲವೆಂದು ನಮ್ಮ ಹೆಚ್.ಜಿ. ರಾಮುಲುರವರು ಎಂ.ಎಸ್. ಪಾಟೀಲ್‌ರವರು ಎಲ್ಲಾ ಶಾಸಕರುಗಳು ಸೇರಿ ಸಭೆ ಮಾಡಿ ಆ ತುರ್ತು ಕಾರ್ಯಕ್ರಮಗಳಿಗೆ 15 ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಅನುದಾನ ಬಿಡುಗಡೆ ಮಾಡಬೇಕೆಂದು ಹೇಳಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಲೋಕಸಭಾ ಸದಸ್ಯರನ್ನು ಮತ್ತು ಶಾಸಕರನ್ನು ಕೇಳಿ, ವಿಷಯ ಸಚಿವ ಸಂಪುಟಕ್ಕೆ ಹೋಗಿ ತೀರ್ಮಾನವಾಗಿದೆ. ತಾವು ಬಹಳ ಪ್ರಾಮಾಣಿಕವಾದಂಥವರು, ನಿಮ್ಮ ಬಗ್ಗೆ I know what is your integrity and commitment to the farmers. ನಾನು ಬಹಳ ವರ್ಷಗಳಿಂದ ನಿಮ್ಮನ್ನು ನೋಡುತ್ತಿದ್ದೇನೆ, ಆ ತರಹ ನೀವು ಮನುಷ್ಯರಲ್ಲ. ನೀವು ಕಂಟ್ರಾಕ್ಟರಿಗೆ ಬಾಕಿ ಕೊಡಬೇಕೆಂದು ಹೇಳಿದಿರಿ, ಬಾಕಿ ಕೊಡತಕ್ಕಂಥದ್ದು ಬೇರೆ ವಿಚಾರ, ಅಲ್ಲಿ ಟೆಂಡರ್ ಹಾಕುವುದಕ್ಕೆ ಬಿಡುತ್ತಿಲ್ಲ. 7 ದಿವಸದ ಒಂದು ಟೆಂಡರ್ ಹಾಕಿದ್ದೇವೆ ಅದಕ್ಕೆ ಒಂದು ಶಾರ್ಟ್ ಟರ್ಮ್ ಟೆಂಡರ್ ಹಾಕಿ ಒಂದೊಂದು ಕೋಟಿ ರೂಪಾಯಿ ಪ್ಯಾಕೇಜ್ ಮಾಡಿ ಕೊಡತಕ್ಕಂಥದ್ದು. 11ನೇ ಕಿ.ಮೀ.ನಲ್ಲಿ 4 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥದ್ದು. ವರ್ಕ್ ಯಾವಾಗ ತೆಗೆದುಕೊಳ್ಳುವುದು, ಎಂಬ ಬಗ್ಗೆ ಹೇಳುತ್ತೇನೆ ಎಂ.ಎಸ್. ಪಾಟೀಲರು, ಮುಜರಾಯಿ ಸಚಿವರು ನಾಗಪ್ಪನವರು ಎಲ್ಲರೂ ಸಭೆಯಲ್ಲಿದ್ದರು. ಟೆಂಡರ್ ಹಾಕಿದ ನೂರು ದಿವಸಗಳಲ್ಲಿ ನೀರು ಕೊಡಬೇಕೆಂದು ಹೇಳಿದ್ದೇವೆ. ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ,

ನಾನು ಹೇಳುತ್ತೇನೆ. ತಕ್ಷಣ ಟೆಂಡರ್ ಕರೆಯುತ್ತೇವೆ. I told SP also. ಆ ತರಹ ಕಛೇರಿಗೆ ಬೀಗ ಹಾಕುವುದನ್ನು ಸರ್ಕಾರ ಸಹಿಸಿಕೊಳ್ಳುವುದಿಲ್ಲ. ಯಾರು ಗುತ್ತಿಗೆದಾರರು ಟೆಂಡರ್ ಹಾಕುವವರನ್ನು ತಡೆಹಿಡಿಯುತ್ತಾರೆ, ನಾವು ಅವರ ಮೇಲೆ ಕಾನೂನು ಕ್ರಮ ತೆಗೆದುಕೊಂಡು ಜೈಲು ಒಳಗಡೆ ಹಾಕಿಸುತ್ತೇವೆ. ಟೆಂಡರ್ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಬೇಕು. No question of piece-work business.

ಶ್ರೀ ಶ್ರೀರಂಗದೇವರಾಯಲು : ನಾನು ಕಾಡಾ ಸಚಿವನಾಗಿದ್ದಾಗ ನಮ್ಮ ಮುಖ್ಯ ಮಂತ್ರಿಯವರಿಗೆ ಕೆನಾಲ್ ಸಲುವಾಗಿ ಹಣವನ್ನು ಬಿಡುಗಡೆ ಮಾಡಬಾರದೆಂದು ಹೇಳಿದ್ದೆ. ಮೇ 10ನೇ ತಾರೀಖಿಗೆ ನೀರು ಕೊಟ್ಟಿದ್ದೇವೆ, 15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಕ್ಕಾಗಿ ಮಾನ್ಯ ಸಚಿವರಿಗೆ ಅಭನಂದನೆಗಳನ್ನು ಸಲ್ಲಿಸುತ್ತೇನೆ.

ಉಪಾಧ್ಯಕ್ಷರು : ದಯಮಾಡಿ ಶ್ರೀರಂಗದೇವರಾಯಲು ಕುಳಿತುಕೊಳ್ಳಬೇಕು. ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಉಪ ಮುಖ್ಯಮಂತ್ರಿಗಳು, ಮಂತ್ರಿಗಳಾಗುವುದಕ್ಕೆ ಮುಂಚೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದರು. ಕನ್ನಡಕ್ಕಾಗಿ ಸೇವೆ ಸಲ್ಲಿಸಿದ್ದಾರೆ ಅದಕ್ಕಾಗಿ ಸಂತೋಷ. ಈ ಸರೋಜಿನಿ ಮಹಿಷಿಯವರ ವರದಿ ಎಷ್ಟು ದಿವಸಗಳಿಂದ ಮೂಲೆಗೆ ಬಿದ್ದಿದೆ. ಅದನ್ನು ಜಾರಿಗೆ ತರಲಿಕ್ಕೆ ಸರ್ಕಾರಕ್ಕೆ ಇರತಕ್ಕಂಥ ಕಷ್ಟ ಏನು? ಆ ವರದಿ 1983ರಲ್ಲಿ ತಯಾರಾಗಿರತಕ್ಕಂಥದ್ದು 1998ರವರೆಗೆ ಆ ವರದಿಯ ಪರಿಸ್ಥಿತಿ ಏನಾಗಿದೆ? ಆ ವರದಿಯನ್ನು ಪ್ರಾಮಾಣಿಕವಾಗಿ ಒಪ್ಪುವುದಕ್ಕೆ ತಮಗೆ ಇರುವ ತೊಂದರೆಗಳು ಏನು? ಈಗಾಗಲೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ಮನೋಹರ ಜೋಷಿಯವರು ಕೇಂದ್ರಕ್ಕೆ ತಮ್ಮ ನಿಯೋಗವನ್ನು ಕರೆದುಕೊಂಡು ಹೋಗಿ, ಶರದ್ ಪವಾರ್‌ರವರ ಅಧ್ಯಕ್ಷತೆಯಲ್ಲಿ ಅನೇಕ ಮುಖಂಡರು ಹೋಗಿ ಗಡಿಯ ಸಮಸ್ಯೆಗೆ ಪರಿಹಾರ ಹುಡುಕುವುದಕ್ಕೆ ತಕ್ಷಣ ಇದರಲ್ಲಿ ಮಧ್ಯೆ ಪ್ರವೇಶ ಮಾಡಬೇಕೆಂದು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಮಹಾಜನ ವರದಿಯನ್ನು ಕೈಬಿಡಬೇಕೆಂದು ಹೇಳಿದ್ದಾರೆ. ನಮ್ಮ ಸರ್ಕಾರದ ವತಿಯಿಂದ ಮುಖ್ಯಮಂತ್ರಿಗಳು ಮತ್ತು ತಾವು ಹೋಗುತ್ತೀರಾ ಅಥವಾ ಒಂದು ನಿಯೋಗವನ್ನು ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವ ವಿಚಾರವನ್ನು ಮಾಡಿದ್ದೀರಾ ಅಂತಹ ವಿಚಾರ ಏನಾದರೂ ಇದೆಯೇ.

4.10 ಪಿ.ಎಂ

ಅಥವಾ ಆಯೋಗವನ್ನು ಕರೆದುಕೊಂಡು ಹೋಗತಕ್ಕಂಥ ಯಾವುದಾದರೂ ಸೂಚನೆ ನಿಮ್ಮಲ್ಲಿದೆಯೇ ಎನ್ನತಕ್ಕಂಥಾದ್ದು ಎರಡನೇಯದು. ಮೂರನೇಯದು ಹೊರನಾಡು ಕನ್ನಡಿಗರು ಎಂದು ಏನಿದ್ದಾರೆ, ಕಾಸರಗೋಡು, ತಾಳವಾಡಿ, ಅಕ್ಕಲಕೋಟೆ, ಅದವಾನಿ ಇಲ್ಲಿ ಇಷ್ಟೆಲ್ಲಾ ತೊಂದರೆ ಇದೆ, ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿ ಕನ್ನಡ ಶಾಲೆಗಳು ಇಲ್ಲ, ಕನ್ನಡ ಪಠ್ಯಪುಸ್ತಕಗಳು ಇಲ್ಲ.